# ಚೆಸ್ ಬಾಲಪ್ರತಿಭೆಗಳ ರೇಸ್



ದೇವನಾರಾಯಣನ್

ಮೈಯಲ್ಲಿ ಕಸರತ್ತು ತೋರುವ ಆಗತ್ಯವಿಲ್ಲದಿದ್ದರೂ ಬುದ್ಧಿಗೆ ಚುರುಕು ನೀಡುವ ಚೆಸ್ ಆಡುವವರು ಧಾರಾಳ. ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕ ಮತ್ತು ಕೇರಳದಲ್ಲಿ ಸಣ್ಣ ವಯಸ್ಸಿನಲ್ಲಿ ಚೆಸ್ ಲೋಕಕ್ಕೆ ಧುಮುಕುವವರ ಸಂಖ್ಯೆ ಹೆಚ್ಚುತ್ತಿದೆ. ಅದರ ಪರಿಣಾಮವೆಂಬಂತೆ ಸಾಧನೆಯ ಪಟ್ಟಿಯೂ ಬೆಳೆಯುತ್ತಿದೆ.

■ ವಿಕ್ರಂ ಕಾಂತಿಕೆರೆ

ಚೆಸ್ ಲೋಕದಲ್ಲಿ ಈಚಿನ ವರ್ಷಗಳಲ್ಲಿ ಹೆಸರು ಮಾಡುತ್ತಿರುವ ತಮಿಳುನಾಡಿನ ಪ್ರಗ್ನಾನಂದ ಕಳೆದ ವರ್ಷ ಜೂನ್‌ನಲ್ಲಿ ವಿಶ್ವಮಟ್ಟದಲ್ಲಿ ದೊಡ್ಡ ಸುದ್ದಿಯಾಗಿದ್ದರು. ಉಜ್ಬೆಕಿಸ್ತಾನದಲ್ಲಿ ನಡೆದ ಉಜ್ ಚೆಸ್ ಕಪ್ ಮಾಸ್ಟರ್ಸ್ ಟೂರ್ನಿಯ ಫೈನಲ್‌ನಲ್ಲಿ ಸ್ಥಳೀಯ ಆಟಗಾರನನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದ ಅವರು ಫಿಡೆ ಲೈವ್ ರೇಟಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದರು. ಸಣ್ಣ ವಯಸ್ಸಿನಲ್ಲೇ ಇಂಟರ್‌ನ್ಯಾಷನಲ್ ಮಾಸ್ಟರ್ ಮತ್ತು ಗ್ರ್ಯಾಂಡ್ ಮಾಸ್ಟರ್ ಪಟ್ಟಗಳನ್ನು ಅಲಂಕರಿಸಿದ್ದ ಅವರು ವಿಶ್ವಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಎದುರು ಗೆದ್ದು ಕೂಡ ಸದ್ದು ಮಾಡಿದ್ದರು.

ಜೂನ್‌ನಲ್ಲಿ ಪ್ರಗ್ನಾನಂದ ಸಾಧನೆಗೆ ಬೆರಗುಗೊಂಡಿದ್ದ ಭಾರತದ ಚೆಸ್‌ಪ್ರಿಯರು ಜಾರ್ಜಿಯಾದಲ್ಲಿ ನಡೆದ ಫಿಡೆ ವಿಶ್ವ ಕೆಡೆಟ್ಸ್ ಕಪ್‌ನ 12 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚಿನ್ನ ಗೆದ್ದ ಬೆಂಗಳೂರಿನ ಪ್ರತೀತಿ ಬೊರ್ದೊಲೊಯ್ ಸಾಧನೆಗೆ ಶಹಬ್ಬಾಸ್ ಹೇಳಿದ್ದರು. ಎಂಟು ವರ್ಷದ ಪೋರ, ಕೇರಳದ ದೇವನಾರಾಯಣನ್ ಕಳ್ಳಿಯತ್ತ್ ಸಾಧನೆಗೂ ಸಂಭ್ರಮಿಸಿದ್ದರು. ಜಾರ್ಜಿಯಾದಲ್ಲಿ ನಡೆದ 8 ವರ್ಷದೊಳಗಿನವರ ಕೆಡೆಟ್ಸ್ ಕಪ್ ಟೂರ್ನಿಯಲ್ಲಿ ದೇವನಾರಾಯಣನ್ 7ನೇ ಸ್ಥಾನ ಗಳಿಸಿದ್ದರು. 2024ರಲ್ಲಿ ಮೈಸೂರಿನಲ್ಲಿ ನಡೆದಿದ್ದ 7 ವರ್ಷದೊಳಗಿನವರ ರಾಷ್ಟ್ರೀಯ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಅವರು ಕಳೆದ ವರ್ಷ ಆಂಧ್ರಪ್ರದೇಶದ ಕಾಕಿನಾಡದಲ್ಲಿ ನಡೆದಿದ್ದ 9 ವರ್ಷದೊಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಆಗಿದ್ದರು. ವಯೋಮಾನ ವಿಭಾಗದಲ್ಲಿ ಎರಡು ಬಾರಿ ಕೇರಳದ ಚಾಂಪಿಯನ್ ಪಟ್ಟಕ್ಕೇರಿದ್ದರು.



ಆದ್ಯಾ ಶೆಟ್ಟಿ

ಹದಿಹರಯಕ್ಕೆ ಕಾಲಿಡುವ ಮೊದಲು ಪ್ರಗ್ನಾನಂದ ಮಾಡಿದ ಸಾಧನೆ ಭಾರತದಲ್ಲಿ, ವಿಶೇಷವಾಗಿ ದಕ್ಷಿಣ ಭಾರತದ ಚೆಸ್‌ನಲ್ಲಿ ಕ್ರಾಂತಿಕಾರಿ ಬದಲಾವಣೆಗಳಿಗೆ ನಾಂದಿ ಹಾಡಿತ್ತು. ದೇವನಾರಾಯಣ್ ಒಬ್ಬರೇ ಅಲ್ಲ, ಆರು, ಏಳು, ಎಂಟು, ಒಂಬತ್ತು ವರ್ಷದ ಚೆಸ್ ಪಟುಗಳು ದೇಶದ ವಿವಿಧ ಕಡೆಗಳಲ್ಲಿ ನಡೆಯುತ್ತಿರುವ ಟೂರ್ನಿಗಳಲ್ಲಿ ಮಿಂಚುತ್ತಿದ್ದಾರೆ. ಅವರ ರೇಟಿಂಗ್ ಗ್ರಾಫ್ ಊರ್ಧ್ವಮುಖವಾಗಿ ಸಾಗುತ್ತಲೇ ಇದೆ. ರೇಟಿಂಗ್‌ನಲ್ಲಿ ತಮಗಿಂತ ‘ಸೀನಿಯರ್’ ಆಗಿರುವವರನ್ನು ನಿರಾಯಾಸವಾಗಿ ಮಣಿಸುವುದೂ ಈಗ ಸಾಮಾನ್ಯ ಎಂಬಂತಾಗಿದೆ.

ಮಂಗಳೂರಿನಲ್ಲಿ ಡಿಸೆಂಬರ್ ಕೊನೆಯಲ್ಲಿ ದಕ್ಷಿಣ

